ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಎಸ್ ವಕೀಲವರಿಂದಃ

3 ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನಾನು ನೋಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಗಳ ವಾದಪತ್ರವನ್ನು ನೋಡಿ ತಿಳಿದುಕೊಂಡಿರುತ್ತೇನೆ. ನನ್ನ ತಾಯಿಯ ಹೆಸರು ಚೆನ್ನಮ್ಮ. ಚೆನ್ನಮ್ಮ 2003 ರಲ್ಲಿ ತೀರಿಕೊಂಡಿರುತ್ತಾರೆ. ಚೆನ್ನಮ್ಮ ಅವರ ಆಸ್ತಿಗೆ ಸಂಬಂಧಪಟ್ಟಂತೆ ನಾನು ಮತ್ತು ನನ್ನ ತಮ್ಮ ರಾಜೇಶ್ ಲಿಖಿತವಾಗಿ ತಿಳಿಸಿರುತ್ತೇನಾ ಎಂದರೆ ತಿಳಿಸಿರುತ್ತೇನೆ. ವಾದಪತ್ರದಲ್ಲಿ ಅಥವಾ ಪ್ರತಿವಾದಿ ಪತ್ರದಲ್ಲಿ ಬರೆಸಿರುತ್ತೇವಾ ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ವಾದ ಪತ್ರ ಅಥವಾ ಪ್ರತಿವಾದ ಪತ್ರದಲ್ಲಿ ಹೇಳಿರುವ ವಿಷಯವನ್ನು ಬರೆಸಿರುತ್ತೇನಾ ಎಂದರೆ ಬರೆಸಿರುವುದಿಲ್ಲ. ನನ್ನ ತಾಯಿಯ ಮರಣ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಹಾಜರುಮಾಡಿರುವುದಿಲ್ಲ. ಆಸ್ತಿಗಳ ಬಗ್ಗೆ ದಾಖಲೆಗಳನ್ನು ಹಾಜರುಮಾಡಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ. ದಾವಾ ಆಸ್ತಿ ಬೊಮ್ಮೇಗೌಡ, ಲಿಂಗಪ್ಪ ಮತ್ತು ಚಿಕ್ಕೇಗೌಡ ಮತ್ತು ಶಿವಲಿಂಗಯ್ಯ ಕಾಲದಲ್ಲಿ ಇದ್ದ ಆಸ್ತಿಗಳ ವಿವರಗಳನ್ನು ಹೇಳುತ್ತೀರಾ ಎಂದರೆ ಹೇಳಲು ಆಗುವುದಿಲ್ಲ. ಸಾಕ್ಷಿಯು ಸ್ವತಃ ನಿವಾಜ್ ಹೊಲ, ರಂಗರಾಯರದೊಡ್ಡಿ ಹೊಲ, ಹೊಸೊಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಹೊಲಗಳ ಹೆಸರು ದಾಖಲೆಗಳಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಲಿಂಗಪ್ಪ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನನ್ನ ತಾತ ತೀರಿಕೊಂಡು ಸುಮಾರು 35 ವರ್ಷ ಆಗಿರಬಹುದು. ನನ್ನ ತಾಯಿ ತೀರಿಕೊಂಡ ನಂತರ ಅವರ ಹೆಸರಿಗೆ ಜಂಟೀ ಖಾತೆ ಇರುವ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮತ್ತು ಲಿಂಗಪ್ಪ ಅವರು  ಯಾವ ದಿನಾಂಕದಂದು ತೀರಿಕೊಂಡಿರುತ್ತಾರೆ ಎಂದು ಏಕೆ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವುದಿಲ್ಲ ಎಂದರೆ ನನಗೆ ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಪ್ಯಾರಾ 8 ನ್ನು ಸಾಕ್ಷಿಗೆ ಓದಿ ಹೇಳಲಾಗಿ ಅದು ನಾನು ಹೇಳಿ ಬರೆಸಿರುತ್ತೇನೆ. ನೊಂದಣಿ ಕಚೇರಿಯಲ್ಲಿ ಪಡೆದುಕೊಂಡ ದಾಖಲೆಯನ್ನು ನ್ಯಾಯಾಲಯಕ್ಕೆ ಏಕೆ ಹಾಜರುಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆ ನನ್ನ ಬಳಿ ಇದೆ. ನಿಪಿ-4 ರಂತೆ 1 ನೇ ವಾದಿ ಸದರಿ ದಾಖಲೆಯನ್ನು  ಹಾಜರುಮಾಡಿದ್ದು ಅದರಲ್ಲಿ ನನ್ನ ತಾಯಿ ನಂಜಮ್ಮ ಮತ್ತು ಗೌರಮ್ಮ ಅವರು ಭಾಗ ಆಗುವುದನ್ನು ಒಪ್ಪಿ ಸಾಕ್ಷಿ ಸಹಿ ಮಾಡಿರುತ್ತಾರೆ ಎಂದರೆ ನನ್ನ ತಾಯಿ ಯಾವುದೇ ಒಪ್ಪಿಗೆ ಸಹಿ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ದಾಖಲೆ ಆಗುವ ಸಮಯದಲ್ಲಿ ನಾನು ಮತ್ತು ನನ್ನ ತಮ್ಮ ಇರಲಿಲ್ಲ ಎಂದರೆ ಸರಿ. ನನ್ನ ತಾತ ಲಿಂಗಪ್ಪ ತೀರಿಕೊಂಡ ನಂತರ ಅವರ ಮೂರು ಜನ ಹೆಣ್ಣು ಮಕ್ಕಳಿಗೆ ದಾವಾ ಆಸ್ತಿಗಳಲ್ಲಿ ಯವುದೇ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಂತೆ ದಾಖಲೆ ಆದ ಮೇಲೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಿಪಿ-5 ರಂತೆ ಖಾತೆ ಮತ್ತು ಪಹಣಿ ಬದಲಾವಣೆ ಆಗಿದ್ದು ನನ್ನ ತಾಯಿ ಅದನ್ನು ಪ್ರಶ್ನೆ ಮಾಡಿರುತ್ತಾರಾ ಎಂದರೆ,  ಸಾಕ್ಷಿಯು ಭಾಗ ಕೊಡುತ್ತೇವೆ ಎಂದು

ಹೇಳಿದ್ದು ಹಾಗಾಗಿ ಪ್ರಶ್ನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಚಿಕ್ಕೇಗೌಡ ಮತ್ತು ಶಿವಲಿಂಗಯ್ಯ ಭಾಗ ಕೊಡುತ್ತೇವೆ ಎಂದು ತೋರಿಸಲು ದಾಖಲೆ ಇದೆಯಾ ಎಂದೆರೆ ದಾಖಲೆ ಇರುವುದಿಲ್ಲ ಸಾಕ್ಷಿಯು ಬಾಯಿ ಮಾತಿಲ್ಲಿ ಹೇಳಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಬೆಲೆ ಜಾಸ್ತಿಯಾದ ಕಾರಣ ನಾನು ಮತ್ತು ನನ್ನ ತಮ್ಮ ಬಾಯಿ ಮಾತಿನಲ್ಲಿ ಭಾಗ ಕೊಡುತ್ತಾರೆ ಎಂದು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.

ಪಿ.ಡಬ್ಲ್ಯೂ.4

ಪಿ.ಡಬ್ಲ್ಯೂ.4